ಸದರಿ ಸಂಸ್ಥೆಗಳ ಸಿಬ್ಬಂದಿಗಳಲ್ಲಿ ಹಿಂದುಳಿದ ವರ್ಗ–2(ಎ), ಎಸ್.ಸಿ ಮತ್ತು ಎಸ್.ಟಿ ಅಭ್ಯರ್ಥಿಗಳನ್ನು ಕೆಳಕಂಡಂತೆ ನೇಮಕಗೊಳಿಸಲಾಗಿದೆ:–

1. ಎಸ್.ಟಿ. 2
2. ಎಸ್.ಸಿ 2
3. ಹಿಂದುಳಿದ ವರ್ಗ2(ಎ) 4

ಈ) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಮತ್ತು ನಿಯಮ 2002 ದಿ:01/05/2003 ರಿಂದ ಜಾರಿಗೆ ಬಂದಿದ್ದು, ಸದರಿ ಶಾಸನದಲ್ಲಿ ನೇಮಕಾತಿ ಸೆಕ್ಷನ್ 9 ರಿಂದ 16 ರವರೆಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಹ ಶಿಕ್ಷಕರನ್ನು 6 ತಿಂಗಳು, 9 ತಿಂಗಳು ಮತ್ತು ಶೈಕ್ಷಣಿಕ ವರ್ಷದ ಅವಧಿಗೆ ಸಂಚಿತ ಸಂಭಾವನೆ ಮೇರೆಗೆ ಕಾರ್ಯನಿರ್ವಹಿಸಿಕೊಳ್ಳಲು ಅನುಮತಿ ನೀಡಿದೆ.

ತಡೆಯಾಜ್ಞೆ ತೆರವಾದ ನಂತರ ನಿಯಮಾನುಸಾರ ಮೀಸಲಾತಿಯನ್ನು ಒಳಗೊಂಡಂತೆ ಎಲ್ಲಾ ಹುದ್ದೆಗಳಿಗೆ ನೇಮಕಾತಿ ಕ್ರಮ ಕೈಗೊಳ್ಳಲಾಗುವುದು.

5249(6019) ಶ್ರೀ ಗೋಪಾಲ ಪೂಜಾರಿ ಕೆ. (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ ಮೆಸ್ಕಾಂ 172 ಉಪ ಗ್ರಾಮ ವಿದ್ಯುದೀಕರಣ ಯೋಜನೆ ಮಂಜೂರು ಮಾಡಿದ್ದು ಅವುಗಳಲ್ಲಿ ಅನುಷ್ಠಾನಗೊಂಡಿರುವ ಯೋಜನೆಗಳು ಎಷ್ಟು;

ಆ) ಹಾಗಿದ್ದಲ್ಲಿ ಉಳಿದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಯಾವಾಗ ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಮತ್ತು ಆ) ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಬೈಂದೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 172 ಉಪಗ್ರಾಮಗಳನ್ನು ಗುರುತಿಸಿ ವಿದ್ಯುದೀಕರಣಗೊಳಿಸಲು ಬಡ್ಡಿರಹಿತ ಸಾಲ ಸೌಲಭ್ಯಕ್ಕಾಗಿ ಪಿ.ಡಿ.ಬಿ. ಯೋಜನೆಯಡಿಯಲ್ಲಿ ಗ್ರಾಮೀಣ ವಿದ್ಯುದ್ದೀಕರಣ ನಿಗಮಕ್ಕೆ (ಆರ್.ಇ.ಸಿ) ಪ್ರಸ್ತಾವನೆಯನ್ನು ಸಲ್ಲಿಸಿ, ವಿದ್ಯುದ್ದೀಕರಣಕ್ಕಾಗಿ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿತ್ತು. ಸಾಲ ಸೌಲಭ್ಯವನ್ನು ಪಡೆಯಲು ಅನುಸರಿಸಬೇಕಾದ ನಿಬಂಧನೆಗಳನ್ನು ಪಾಲಿಸಲು ಇಂಧನ ಇಲಾಖೆಯು, ಗ್ರಾಮೀಣ ವಿದ್ಯುದೀಕರಣ ನಿಗಮಕ್ಕೆ ಹೆಚ್ಚುವರಿ ಕಾಲಾವಕಾಶವನ್ನು ಕೋರಿ ಮನವಿಯನ್ನು ಸಲ್ಲಿಸಿತ್ತು. ಆದರೆ ಗ್ರಾಮೀಣ ವಿದ್ಯುದ್ದೀಕರಣ ನಿಗಮವು ಬಡ್ಡಿ ರಹಿತ ಸಾಲ ಸೌಲಭ್ಯವನ್ನು ಹಿಂದಕ್ಕೆ ಪಡೆದುದರಿಂದ ಟೆಂಡರ್ ಪ್ರಕ್ರಿಯೆಯನ್ನು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ರದ್ದುಪಡಿಸಬೇಕಾಯಿತು. ಆದುದರಿಂದ ಮೇಲ್ಕಂಡ 172 ಉಪಗ್ರಾಮಗಳಲ್ಲಿ ಯಾವ ಉಪಗ್ರಾಮವೂ ವಿದ್ಯುದೀಕರಣಗೊಳ್ಳಲಿಲ್ಲ.

ಪುನಃ ಬಡ್ಡಿ ಸಹಿತ ಸಾಲ ಸೌಲಭ್ಯದ ಪ್ರಸ್ತಾವನೆಯನ್ನು ಗ್ರಾಮೀಣ ವಿದ್ಯುದೀಕರಣ ನಿಗಮಕ್ಕೆ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು 29–01–2005ರಲ್ಲಿ ಸಲ್ಲಿಸಿತು. ಈ ಮಧ್ಯೆ, ಕೇಂದ್ರ ಸರಕಾರವು ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯನ್ನು

ನೂತನವಾಗಿ ಜಾರಿಗೆ ತಂದಿರುವ ಹಿನ್ನಲೆಯಲ್ಲಿ, ಗ್ರಾಮೀಣ ವಿದ್ಯುದೀಕರಣ ನಿಗಮಕ್ಕೆ ಸಲ್ಲಿಸಲಾಗಿದ್ದ ಬಡ್ಡಿರಹಿತ ಸಾಲದ ಪರಿಸ್ತಾವನೆಯನ್ನು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಹಿಂದಕ್ಕೆ ಪಡೆಯಿತು. ಪ್ರಸ್ತುತ, ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಬೈಂದೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ 172 ಉಪಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಪ್ರಸ್ತಾವನೆಯನ್ನು ಸಿದ್ದಪಡಿಸಿ, ಗ್ರಾಮೀಣ ವಿದ್ಯುದೀಕರಣ ನಿಗಮಕ್ಕೆ ಅನುಮೋದನೆಗಾಗಿ ದಿನಾಂಕ : 18.07.2005 ರಂದು ಸಲ್ಲಿಸಿದೆ. ಈ ಪ್ರಸ್ತಾವನೆಗೆ ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಅನುಮೋದನೆ ದೊರೆತ ನಂತರ ವಿದ್ಯುದೀಕರಣದ ಕಾಮಗಾರಿಗಳನ್ನು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಕೈಗೆತ್ತಿಕೊಳ್ಳುವುದು.

5250(5945) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ (ಸಾಗರ) ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆಯ ವಿಧಾನ ಸಭಾ ವ್ಯಾಪ್ತಿಯಲ್ಲಿ ಐಟಿಐ ಮತ್ತು ಪಾಲಿಟೆಕ್ನಿಕ್ ವಿದ್ಯಾಭ್ಯಾಸ ಮಾಡುವವರ ಸಂಖ್ಯೆ ಹೆಚ್ಚಾಗಿ ತಾಲ್ಲೂಕಿನಲ್ಲಿ ಸರ್ಕಾರಿ ಐಟಿಐ ಮತ್ತು ಪಾಲಿಟೆಕ್ನಿಕ್ ಕಾಲೇಜು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ ;

ಆ) ಹಾಗಿದ್ದಲ್ಲಿ ಯಾವ ಶೈಕ್ಷಣಿಕ ಸಾಲಿನಿಂದ ಸ್ಥಾಪಿಸಲು ಸರ್ಕಾರ ಉದ್ದೇಶಿಸಲಾಗಿದೆ.

ಇ) ಗ್ರಾಮೀಣ ಹಾಗೂ ಬಡ ವಿದ್ಯಾರ್ಥಿಗಳು ಖಾಸಗಿ ಕಾಲೇಜುಗಳಲ್ಲಿ ಹೆಚ್ಚು ಶುಲ್ಕ ನೀಡಿ ಪ್ರವೇಶ ಪಡೆಯಲು ತೊಂದರೆಯಾಗುವುದಿಲ್ಲವೆ;

ಈ) ಖಾಸಗಿ ವಿದ್ಯಾಸಂಸ್ಥೆಗಳು ಪ್ರವೇಶಕ್ಕಾಗಿ ಹೆಚ್ಚು ಹಣ ಪಡೆಯುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸದ್ಯದ ಸ್ಥಿತಿಯಲ್ಲಿ ಈ ಶುಲ್ಕ ಹೆಚ್ಚಿಸಿಸುವುದಿಲ್ಲ.

ಈ) ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಶುಲ್ಕವನ್ನು ವಿಧಿಸಲು ಸರ್ಕಾರ ಯಾವುದೇ ನಿಗದಿಯನ್ನು ಮಾಡಿರುವುದಿಲ್ಲ. ಸಮಂಜಸವಾದ ಶುಲ್ಕವನ್ನು ಪಡೆಯದೆ ಹೆಚ್ಚು ಹನ ಪಡೆದಲ್ಲಿ ಸರ್ಕಾರವು ಪರಿಶೀಲಿಸುವುದು.

5251(5939) ಶ್ರೀ ಗೋವಿಂದ್ ಎಂ. ಕಾರಜೋಳ್ ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹೆದ್ದಾರಿಗಳ (ರಸ್ತೆ) ನಿರ್ಮಾಣ ಮತ್ತು ಅಭಿವೃದ್ದಿ ಸಮಯದಲ್ಲಿ ಕಟಾವು ಮಾಡಿದ ಮರಗಳ ಸಂಖ್ಯೆ ಎಷ್ಟು : (ರಸ್ತೆವಾರು ಮಾಹಿತಿ ಒದಗಿಸುವುದು) ;

ಆ) ಕಟಾವು ಮಾಡಿದ ಮರಗಳ ಮಾರಾಟದಿಂದ ಸರ್ಕಾರಕ್ಕೆ ಬಂದ ಆದಾಯದ ಮೊತ್ತ ಎಷ್ಟು ?